All India Radio: Bangalore
National Bulletin In Kannada
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

06.12.2024 13.10 p.m.

****************

ಮುಖ್ಯಾಂಶಗಳು

- ರಾಜ್ಯಸಭಾ ಸಭಾಂಗಣದಲ್ಲಿ ನೋಟಿನ ಕಂತೆ ಪತ್ತೆ; ಸಭಾಪತಿ ಅವರಿಂದ ತನಿಖೆಗೆ ಆದೇಶ
- ಲೋಕಸಭೆಯಲ್ಲಿಂದು ಪ್ರತಿಪಕ್ಷಗಳ ಗದ್ದಲ; ಸದನ ಸೋಮವಾರಕ್ಕೆ ಮುಂದೂಡಿಕೆ
- ಡಾ.ಬಿ.ಆರ್.ಅಂಬೇಡ್ಕರ್ ಪುಣ್ಯ ಸ್ಮರಣೆ; ರಾಷ್ಟ್ರಪತಿ, ಪ್ರಧಾನಿ ಸೇರಿದಂತೆ ಗಣ್ಯರಿಂದ ಗೌರವ ನಮನ
- ೧೦೦ ದಿನಗಳ ಕ್ಷಯರೋಗ ನಿರ್ಮೂಲನಾ ಅಭಿಯಾನಕ್ಕೆ ನಾಳೆ ಕೇಂದ್ರ ಸಚಿವ ಜೆ.ಪಿ.ನಡ್ಡಾ ಚಾಲನೆ
- ಈಶಾನ್ಯ ಭಾರತಕ್ಕೆ ಆಗ್ನೇಯ ಏಷ್ಯಾದ ಅಭಿವೃದ್ಧಿಯ ಕೇಂದ್ರವಾಗುವ ಸಾಮರ್ಥ್ಯವಿದೆ - ಕೇಂದ್ರ ಸಚಿವ ಸರ್ಬಾನಂದ ಸೋನೊವಾಲ್

****************

ರಾಜ್ಯಸಭಾ ಸಭಾಂಗಣದಲ್ಲಿ ನಿನ್ನೆ ನೋಟುಗಳ ಕಂತೆಗಳು ಪತ್ತೆಯಾಗಿವೆ. ನಿನ್ನೆ ಸದನ ಮುಂದೂಡಲ್ಪಟ್ಟ ನಂತರ ಎಂದಿನಂತೆ ನಡೆಸುವ ತಪಾಸಣೆಯ ವೇಳೆ ಕಂತು ಕಂತುಗಳಲ್ಲಿ ಕಾಂಗ್ರೆಸ್ ಸಂಸದ ಅಭಿಷೇಕ್ ಮನುಸಿಂಘ್ವಿ ಅವರ ಆಸನ ಸಂಖ್ಯೆ ೨೨೨ರಡಿ ಹಣ ಪತ್ತೆಯಾಗಿರುವ ಕುರಿತು ಇಂದು ರಾಜ್ಯಸಭೆ ಸದನ ಸೇರಿದಾಗ ಸಭಾಪತಿ ಜಗದೀಪ್ ಧನ್‌ಕರ್ ಮಾಹಿತಿ ನೀಡಿದರು.

ಇದೇ ವೇಳೆ ಅವರು, ಈ ವಿಷಯವನ್ನು ಸಂಸದರ ಗಮನಕ್ಕೆ ತರಲಾಗಿದ್ದು, ತನಿಖೆ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಈ ಕುರಿತು ಗಂಭೀರ ತನಿಖೆಯಾಗಬೇಕು ಎಂಬ ಸಭಾಪತಿ ಅವರ ಅಭಿಪ್ರಾಯಕ್ಕೆ ಒಮ್ಮತ ವ್ಯಕ್ತಪಡಿಸಿದ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, ಈ ವಿಷಯದ ಬಗ್ಗೆ ಯಾರು ಆಕ್ಷೇಪ ವ್ಯಕ್ತಪಡಿಸಬಾರದು ಎಂದರು.

ಸಭಾನಾಯಕ ಜೆ.ಪಿ.ನಡ್ಡಾ ಮಾತನಾಡಿ, ಇದು ಖಂಡನಾರ್ಹ ಮತ್ತು ಮೇಲ್ಮನೆಯ ಘನತೆಯನ್ನು ಕುಗ್ಗಿಸುವ ಘಟನೆಯಾಗಿದೆ ಎಂದರು. ಏತನ್ಮಧ್ಯೆ, ತನಿಖೆಗೆ ತಮ್ಮ ಪಕ್ಷದಿಂದ ಯಾವುದೇ ಅಭ್ಯಂತರವಿಲ್ಲ, ತನಿಖೆಯ ನಂತರ ತೀರ್ಮಾನಕ್ಕೆ ಬರಬಹುದು ಎಂದು ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

ಈ ಕುರಿತು, ಸ್ಪಷ್ಟನೆ ನೀಡಿದ ಅಭಿಷೇಕ ಮನುಸಿಂಘ್ವಿ, ತಮ್ಮೊಂದಿಗೆ ಯಾವಾಗಲು ಕೇವಲ ೫೦೦ ರೂಪಾಯಿ ಇರುತ್ತದೆ. ನಿನ್ನೆ ತಾವು ಮಧ್ಯಾಹ್ನ ೧೨.೫೭ಕ್ಕೆ ಸದನಕ್ಕೆ ಆಗಮಿಸಿದೆ ೧.೩೦ರ ವೇಳೆಗೆ ಕ್ಯಾಂಟಿನ್‌ನಲ್ಲಿ ಸ್ವಲ್ಪ ಹೊತ್ತು ಕುಳಿತು ಸಂಸತ್ ಭವನದಿಂದ ನಿರ್ಗಮಿಸಿದೆ ಎಂದಿದ್ದಾರೆ.

****************

ಭಾರತ ರತ್ನ, ಡಾ.ಬಿ.ಆರ್.ಅಂಬೇಡ್ಕರ್ ಅವರ ೬೮ನೇ ಪುಣ್ಯತಿಥಿ ಅಂಗವಾಗಿ ಇಂದು ಮಹಾಪರಿನಿರ್ವಾಣ ದಿವಸ್ ಆಚರಿಸಲಾಗುತ್ತಿದೆ. ದೇಶಾದ್ಯಂತ ಇಂದು ಬಾಬಾಸಾಹೇಬ್ ಅಂಬೇಡ್ಕರ್ ಅವರ ಬೋಧನೆಗಳು ಮತ್ತು ನ್ಯಾಯಯುತ ಮತ್ತು ಅಂತರ್ಗತ ಸಮಾಜವನ್ನು ನಿರ್ಮಿಸುವ ಬದ್ಧತೆಯನ್ನು ಪುನರ್ ಮನನ ಮಾಡಿಕೊಳ್ಳುವ ಮೂಲಕ ಅವರಿಗೆ ಗೌರವ ಸಲ್ಲಿಸಲಾಗುತ್ತಿದೆ.

ರಾಷ್ಟ್ರ ನಿರ್ಮಾಣದಲ್ಲಿ ಡಾ.ಅಂಬೇಡ್ಕರ್ ಅವರ ಕೊಡುಗೆಯನ್ನು ಎತ್ತಿ ಹಿಡಿಯಲು ದೇಶಾದ್ಯಂತ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್, ಪ್ರಧಾನಿ ನರೇಂದ್ರ ಮೋದಿ, ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ನವದೆಹಲಿಯ ಸಂಸತ್ ಭವನದ ಸಂಕೀರ್ಣದಲ್ಲಿರುವ ಪ್ರೇರಣಾ ಸ್ಥಳದಲ್ಲಿ ಡಾ. ಅಂಬೇಡ್ಕರ್ ಅವರಿಗೆ ಪುಷ್ಪ ನಮನ ಸಲ್ಲಿಸಿದರು. ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಂಸತ್ತಿನ ಇತರ ಸದಸ್ಯರು ಮತ್ತಿತರರು ಪ್ರೇರಣಾ ಸ್ಥಳದಲ್ಲಿ ಭಾರತೀಯ ಸಂವಿಧಾನದ ಮುಖ್ಯ ವಾಸ್ತುಶಿಲ್ಪಿ ಅವರಿಗೆ ಪುಷ್ಪ ನಮನ ಸಲ್ಲಿಸಿದರು.

ಸಾಮಾಜಿಕ ಮಾಧ್ಯಮದಲ್ಲಿ ಪ್ರಧಾನಿ, ಡಾ. ಅಂಬೇಡ್ಕರ್ ಅವರನ್ನು ಸಾಮಾಜಿಕ ನ್ಯಾಯದ ದಾರಿದೀಪ ಎಂದು ಬಣ್ಣಿಸಿದ್ದಾರೆ. ಸಮಾನತೆ ಮತ್ತು ಮಾನವ ಘನತೆಗಾಗಿ ಡಾ. ಅಂಬೇಡ್ಕರ್ ಅವರ ಅವಿರತ ಹೋರಾಟ ಯುವ ಪೀಳಿಗೆಗೆ ಸ್ಫೂರ್ತಿ ನೀಡುತ್ತಿದೆ ಎಂದು ಅವರು ತಿಳಿಸಿದ್ದಾರೆ.

****************

ಒಡಿಶಾದ ಭುವನೇಶ್ವರದಲ್ಲಿ ಭಾರತ ರತ್ನ, ಬಾಬಾಸಾಹೇಬ್ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಇಂದು ಪುಷ್ಪನಮನ ಸಲ್ಲಿಸಿದರು.

೬೯ನೇ ಪುಣ್ಯತಿಥಿಯ ಅಂಗವಾಗಿ 'ಮಹಾಪರಿನಿರ್ವಾಣ್ ದಿವಸ್' ಸಂದರ್ಭದಲ್ಲಿ ರಾಷ್ಟ್ರಪತಿಯವರೊಂದಿಗೆ ರಾಜ್ಯಪಾಲ ರಘುಬರ್ ದಾಸ್ ಮತ್ತು ಇತರ ಅನೇಕ ಗಣ್ಯರು ಪ್ರತಿಮೆಗೆ ಗೌರವ ನಮನ ಸಲ್ಲಿಸಿದರು.

ಒಡಿಶಾಗೆ ಐದು ದಿನಗಳ ಭೇಟಿಯಲ್ಲಿರುವ ರಾಷ್ಟ್ರಪತಿಗಳು ಇಂದು ಮಧ್ಯಾಹ್ನ ಮಯೂರ್‌ಭಂಜ್ ಜಿಲ್ಲೆಯ ಉಪರಬೆದಕ್ಕೆ ಭೇಟಿ ನೀಡಲಿದ್ದಾರೆ. ಅವರು ಇಂದು ಮತ್ತು ನಾಳೆ ಮಯೂರ್‌ಭಂಜ್ ಜಿಲ್ಲೆಯಲ್ಲಿ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ.

****************

ಪ್ರಧಾನಿ ನರೇಂದ್ರ ಮೋದಿ ಅವರಿಂದು ನವದೆಹಲಿಯ ಭಾರತ ಮಂಟಪದಲ್ಲಿ ಅಷ್ಟಲಕ್ಷ್ಮಿ ಮಹೋತ್ಸವವನ್ನು ಉದ್ಘಾಟಿಸಲಿದ್ದಾರೆ. ಮೂರು ದಿನಗಳ ಈ ಉತ್ಸವದಲ್ಲಿ ಎಲ್ಲಾ ಎಂಟು ಈಶಾನ್ಯ ರಾಜ್ಯಗಳ ಸಂಸ್ಕೃತಿ, ಜವಳಿ ಉದ್ಯಮ, ಕರಕುಶಲ ಕಲೆ, ಪ್ರವಾಸೋದ್ಯಮ ಅವಕಾಶಗಳು ಮತ್ತು ವಿಶಿಷ್ಠ ಉತ್ಪನ್ನಗಳನ್ನು ಪ್ರದರ್ಶಿಸಲಾಗುತ್ತಿದೆ. ಈ ಹಬ್ಬ ಎಂಟು ಈಶಾನ್ಯ ರಾಜ್ಯಗಳಾದ, ಅರುಣಾಚಲ ಪ್ರದೇಶ, ಅಸ್ಸಾಂ, ಮಣಿಪುರ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್, ಸಿಕ್ಕಿಂ ಮತ್ತು ತ್ರಿಪುರಗಳಿಂದ ಸ್ಫೂರ್ತಿ ಪಡೆದು ಅಷ್ಟಲಕ್ಷ್ಮಿ ಎಂದು ಕರೆಯಲಾಗಿದೆ.

ಉತ್ಸವದಲ್ಲಿ, ೨೫೦ ಕ್ಕೂ ಹೆಚ್ಚು ಕುಶಲಕರ್ಮಿಗಳು ವಿಶಿಷ್ಟವಾದ ಕರಕುಶಲ ವಸ್ತುಗಳು, ಕೈಮಗ್ಗಗಳು ಮತ್ತು ಕೃಷಿ-ತೋಟಗಾರಿಕೆ ಉತ್ಪನ್ನಗಳನ್ನು ಪ್ರದರ್ಶಿಸಲಾಗುತ್ತಿದೆ.

ಉತ್ಸವದ ಭಾಗವಾಗಿ ಫ್ಯಾಶನ್ ಶೋ, ವಿನ್ಯಾಸ ಸಮಾವೇಶ, ಖರೀದಿದಾರ-ಮಾರಾಟಗಾರರ ಸಭೆಯನ್ನು ಆಯೋಜಿಸಲಾಗಿದೆ. ಈ ಪ್ರದೇಶದ ೩೨೦ ರೈತರು ಮತ್ತು ಕುಶಲಕರ್ಮಿಗಳ ಉತ್ಪನ್ನಗಳು ಮತ್ತು ಕಲೆಗಳನ್ನು ಪ್ರದರ್ಶಿಸುವ ಗ್ರಾಮೀಣ ಹಾತ್ ಬಜಾರ್ ಪ್ರಮುಖ ಆಕರ್ಷಣೆಯಾಗಿದೆ.

****************

ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಜೆ.ಪಿ ನಡ್ಡಾ ಅವರು ನಾಳೆ ಹರಿಯಾಣದ ಪಂಚಕುಲದಲ್ಲಿ ಕ್ಷಯರೋಗ ನಿರ್ಮೂಲನೆ ಕುರಿತ ೧೦೦ ದಿನಗಳ ಅಭಿಯಾನಕ್ಕೆ ಚಾಲನೆ

ನೀಡಲಿದ್ದಾರೆ. ಈ ಕಾರ್ಯಕ್ರಮದಲ್ಲಿ ಹರಿಯಾಣ ಮುಖ್ಯಮಂತ್ರಿ ಆರ್ತಿ ಸಿಂಗ್ ರಾವ್ ಕೂಡ ಉಪಸ್ಥಿತರಿರುವರು.

ಈ ಉಪಕ್ರಮವನ್ನು ೩೩ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ೩೪೭ ಜಿಲ್ಲೆಗಳಲ್ಲಿ ಜಾರಿಗೊಳಿಸಲಾಗುತ್ತಿದೆ. ಇದು ೨೦೧೮ ರ ದೆಹಲಿ ಎಂಡ್-ಟಿಬಿ ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಕ್ಷಯರೋಗ-ಮುಕ್ತ ಭಾರತದ ದೃಷ್ಟಿಕೋನಕ್ಕೆ ಹೊಂದಿಕೆಯಾಗುತ್ತದೆ.

ಅಂದಿನಿಂದ, ದೇಶಾದ್ಯಂತ ಕ್ಷಯರೋಗ ತಡೆಗಟ್ಟುವಿಕೆ, ರೋಗನಿರ್ಣಯ ಮತ್ತು ಚಿಕಿತ್ಸಾ ಸೇವೆಗಳನ್ನು ಬಲಪಡಿಸಲು ಕಾರ್ಯಕ್ರಮದಿಂದ ನಿರ್ಣಾಯಕ ಉಪಕ್ರಮಗಳನ್ನು ಪ್ರಾರಂಭಿಸಲಾಗಿದೆ. ೧೦೦-ದಿನಗಳ ಅಭಿಯಾನವು ಟಿಬಿ ಸಂಭವ ದರಗಳು, ರೋಗನಿರ್ಣಯದ ವ್ಯಾಪ್ತಿ ಮತ್ತು ಮರಣ ದರಗಳಂತಹ ಪ್ರಮುಖ ಸೂಚಕಗಳಲ್ಲಿ ಕಾರ್ಯಕ್ರಮದ ಕಾರ್ಯಕ್ಷಮತೆಯನ್ನು ಸುಧಾರಿಸುವ ಗುರಿಯನ್ನು ಹೊಂದಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ರಾಷ್ಟ್ರೀಯ ಟಿಬಿ ನಿರ್ಮೂಲನೆ ಕಾರ್ಯಕ್ರಮದ ಅಡಿಯಲ್ಲಿ ಭಾರತದಲ್ಲಿ ಟಿಬಿ ಅಧಿಸೂಚನೆ ಮತ್ತು ಮರಣದ ಸವಾಲುಗಳನ್ನು ಎದುರಿಸುವ ಮೂಲಕ ಟಿಬಿ ನಿರ್ಮೂಲನೆ ಗುರಿಯನ್ನು ಸಾಧಿಸುವ ಸರ್ಕಾರದ ಬದ್ಧತೆಯನ್ನು ಈ ಅಭಿಯಾನವು ಒತ್ತಿಹೇಳುತ್ತದೆ.

****************

ಮುಂಬರುವ ವರ್ಷಗಳಲ್ಲಿ ಈಶಾನ್ಯ ಭಾರತ ಆಗ್ನೇಯ ಏಷ್ಯಾದ ಅಭಿವೃದ್ಧಿಯ ಕೇಂದ್ರವಾಗುವ ಸಾಮರ್ಥ್ಯವನ್ನು ಹೊಂದಿದೆ ಎಂದು ಬಂದರು, ಹಡಗು ಮತ್ತು ಜಲಮಾರ್ಗ ಸಚಿವ ಸರ್ಬಾನಂದ ಸೋನೊವಾಲ್ ಅವರು ಹೇಳಿದ್ದಾರೆ.

ನವದೆಹಲಿಯಲ್ಲಿಂದು ಈಶಾನ್ಯದ ಸಬಲೀಕರಣ - ಆತ್ಮನಿರ್ಭರ ಭಾರತಕ್ಕಾಗಿ ಪರಿವರ್ತನೆಯ ದಶಕ ಕುರಿತು ಮಾಧ್ಯಮಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಈ ಪ್ರದೇಶವನ್ನು ಪರಿವರ್ತಿಸಿದ ಸರ್ಕಾರದ ಆಕ್ಟ್ ಈಸ್ಟ್ ನೀತಿಯಲ್ಲಿ ಈಶಾನ್ಯ ಭಾರತದ ಪಾತ್ರ ಪ್ರಮುಖವಾಗಿದೆ ಎಂದು ಹೇಳಿದರು.

ಕಳೆದ ೧೦ ವರ್ಷಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ೭೦ ಕ್ಕೂ ಹೆಚ್ಚು ಬಾರಿ ಈಶಾನ್ಯ ರಾಜ್ಯಗಳಿಗೆ ಭೇಟಿ ನೀಡಿದ್ದರೆ, ಕೇಂದ್ರ ಸಚಿವರು ಪ್ರತಿ ೧೫ ದಿನಗಳಿಗೊಮ್ಮೆ ಈ ಪ್ರದೇಶಕ್ಕೆ ಭೇಟಿ

ನೀಡಿದ್ದಾರೆ. ಇದು ಜನರ ಸಬಲೀಕರಣದ ಜೊತೆಗೆ ಪ್ರದೇಶದಲ್ಲಿ ಶಾಂತಿ ಮತ್ತು ಸ್ಥಿರತೆಯನ್ನು ತಂದಿದೆ ಎಂದು ಅವರು ಹೇಳಿದರು.

ವಿಕಸಿತ ಭಾರತ-೨೦೪೭ ದೃಷ್ಟಿಕೋನವನ್ನು ಸಾಕಾರಗೊಳಿಸುವಲ್ಲಿ ಮತ್ತು ಭಾರತವನ್ನು ಆತ್ಮನಿರ್ಭರ್ ಮಾಡುವಲ್ಲಿ ಈಶಾನ್ಯ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಸೋನೊವಾಲ್ ಹೇಳಿದರು.

ಬಳಿಕ ಸಚಿವರು, ಸಮಾಜ ಸುಧಾರಕ ಮತ್ತು ಭಾರತೀಯ ಸಂವಿಧಾನದ ಶಿಲ್ಪಿ, ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರ ೬೯ ನೇ ಪುಣ್ಯತಿಥಿಯಂದು ಇಂದು ಮಹಾಪರಿನಿರ್ವಾಣ ದಿವಸ್‌ನಂದು ಗೌರವ ಸಲ್ಲಿಸಿದರು.

****************

೧೨ನೇ ಪುದುಚೇರಿ ಅಂತಾರಾಷ್ಟ್ರೀಯ ಸಾಕ್ಷ್ಯಚಿತ್ರ ಮತ್ತು ಕಿರುಚಿತ್ರೋತ್ಸವ ಇಂದು ಕೇಂದ್ರಾಡಳಿತ ಪ್ರದೇಶದಲ್ಲಿ ಆರಂಭವಾಗಲಿದೆ. ಮೂರು ದಿನಗಳ ಉತ್ಸವದಲ್ಲಿ ಪ್ರಪಂಚದಾದ್ಯಂತದ ೩೫ ಕಿರುಚಿತ್ರಗಳು ಮತ್ತು ಸಾಕ್ಷ್ಯಚಿತ್ರಗಳನ್ನು ಪ್ರದರ್ಶಿಸಲಾಗುತ್ತದೆ.

ಈ ಕಾರ್ಯಕ್ರಮವನ್ನು ಪಾಂಡಿಚೇರಿ ವಿಶ್ವವಿದ್ಯಾನಿಲಯದಲ್ಲಿ ಎಲೆಕ್ಟ್ರಾನಿಕ್ ಮಾಧ್ಯಮ ಮತ್ತು ಸಮೂಹ ಸಂವಹನ ವಿಭಾಗವು ಭಾರತೀಯ ರಾಷ್ಟ್ರೀಯ ಚಲನಚಿತ್ರ ಅಭಿವೃದ್ಧಿ ನಿಗಮ, ತಮಿಳುನಾಡು ಪ್ರಗತಿಪರ ಬರಹಗಾರರ ಕಲಾವಿದರ ಸಂಘ ಮತ್ತು ಪುದುಚೇರಿ ಚಲನಚಿತ್ರ ವೇದಿಕೆಯ ಸಹಯೋಗದೊಂದಿಗೆ ಆಯೋಜಿಸಿದೆ.

****************

ಸತತ ೧೧ನೇ ಬಾರಿಗೆ ರೆಪೊ ದರವನ್ನು ಬದಲಿಸದೇ ಶೇಕಡ ೬.೫ ರಲ್ಲೇ ಮುಂದುವರಿಸಲು ಭಾರತೀಯ ರಿಸರ್ವ್ ಬ್ಯಾಂಕ್ ನಿರ್ಧರಿಸಿದೆ.

ಸ್ಥಾಯಿ ಠೇವಣಿ ಸೌಲಭ್ಯ (ಎಸ್ ಡಿ ಎಫ್) ದರ ಶೇಕಡ ೬.೨೫ ರಲ್ಲೇ ಮುಂದುವರಿದಿದ್ದು, ಮತ್ತು ಮಾರ್ಜಿನಲ್ ಸ್ಟ್ಯಾಂಡಿಂಗ್ ಫೆಸಿಲಿಟಿ ಎಂಎಸ್‌ಎಫ್- ರಿಸರ್ವ್ ಬ್ಯಾಂಕ್ ನಿಂದ ಎರವಲು ಪಡೆಯಬಹುದಾದ ತುರ್ತು ಮೊತ್ತದ ದರ ಮತ್ತು ಬ್ಯಾಂಕ್ ದರ ಶೇಕಡ ೬.೭೫ ರಷ್ಟೇ ಇದೆ.

ಡಿಸೆಂಬರ್ ೪, ೫ ಮತ್ತು ಇಂದು ವಿತ್ತೀಯ ನೀತಿ ಸಮಿತಿ ಸಭೆ ನಡೆದು ಈ ನಿರ್ಧಾರವನ್ನು ಕೈಗೊಳ್ಳಲಾಗಿದೆ.

****************

ಶಾರ್ಜಾದಲ್ಲಿ ನಡೆಯಲಿರುವ ಪುರುಷರ ೧೯ ವರ್ಷದೊಳಗಿನವರ ಏಷ್ಯಾ ಕಪ್ ಏಕದಿನ ಕ್ರಿಕೆಟ್ ಪಂದ್ಯಾವಳಿಯ ಸೆಮಿಫೈನಲ್ ಪಂದ್ಯದಲ್ಲಿ ಭಾರತ ಶ್ರೀಲಂಕಾವನ್ನು ಮುಖಾಮುಖಿಯಾಗಿವೆ.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಶ್ರೀಲಂಕಾ, ಇತ್ತೀಚಿನ ವರದಿ ಬಂದಾಗ ೩೯ ಓವರ್‌ಗಳಲ್ಲಿ ೫ ವಿಕೆಟ್ ನಷ್ಟಕ್ಕೆ ೧೪೫ ರನ್ ಮಾಡಿ ಆಡುತ್ತಿದೆ.

ಮತ್ತೊಂದು ಸೆಮಿಫೈನಲ್ ಪಂದ್ಯದಲ್ಲಿ ಪಾಕಿಸ್ತಾನ ಮತ್ತು ಬಾಂಗ್ಲಾದೇಶ ತಂಡಗಳು ಮುಖಾಮುಖಿಯಾಗಿದ್ದು, ಟಾಸ್ ಗೆದ್ದ ಬಾಂಗ್ಲಾದೇಶ ಫೀಲ್ಡಿಂಗ್ ಆಯ್ದುಕೊಂಡಿದೆ.

****************

ವಿಶ್ವ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್ ೨೦೨೪ ಇಂದು ಬಹ್ರೇನ್‌ನ ಮನಾಮದಲ್ಲಿ ಪ್ರಾರಂಭವಾಗಲಿದೆ. ಚಾಂಪಿಯನ್‌ಶಿಪ್‌ನಲ್ಲಿ ಭಾರತದ ಮೂವರು ಮಹಿಳಾ ವೇಟ್‌ಲಿಫ್ಟರ್‌ಗಳು ಭಾಗವಹಿಸಲಿದ್ದಾರೆ. ಆದರೆ, ಪುರುಷರ ವಿಭಾಗದಲ್ಲಿ ಈ ವರ್ಷ ಭಾರತ ಸ್ಪರ್ಧಿಸುತ್ತಿಲ್ಲ.

ಮೂರು ಬಾರಿ ಒಲಿಂಪಿಯನ್ ಮತ್ತು ಟೋಕಿಯೊ ೨೦೨೦ ರ ಬೆಳ್ಳಿ ಪದಕ ವಿಜೇತೆ ಮೀರಾಬಾಯಿ ಚಾನು ಕೂಟದಲ್ಲಿ  ಸ್ಪರ್ಧಿಸುತ್ತಿಲ್ಲ.

ಚಾನು ಅನುಪಸ್ಥಿತಿಯಲ್ಲಿ ಜ್ಞಾನೇಶ್ವರಿ ಯಾದವ್ ಮಹಿಳೆಯರ ೪೯ ಕೆಜಿ ವಿಭಾಗದಲ್ಲಿ ಭಾರತವನ್ನು ಪ್ರತಿನಿಧಿಸಲಿದ್ದಾರೆ.

ಕಾಮನ್‌ವೆಲ್ತ್ ಕ್ರೀಡಾಕೂಟದ ಬೆಳ್ಳಿ ಪದಕ ವಿಜೇತೆ ಬಿಂದ್ಯಾರಾಣಿ ದೇವಿ ಮಹಿಳೆಯರ ೫೫ ಕೆಜಿ ನಾನ್-ಒಲಿಂಪಿಕ್ ತೂಕ ವರ್ಗದ ಬಿ ಗುಂಪಿನಲ್ಲಿ ಸ್ಪರ್ಧಿಸಲಿದ್ದರೆ, ಡಿತಿಮೋನಿ ಸೋನೊವಾಲ್ ಅವರು ೬೪ ಕೆಜಿಯ ಸಿ ಗುಂಪಿನಲ್ಲಿ ಒಲಿಂಪಿಕ್ ಅಲ್ಲದ ತೂಕದ ವರ್ಗದಲ್ಲಿ ಸ್ಪರ್ಧಿಸುತ್ತಿದ್ದಾರೆ.

****************

ಆಸ್ಟ್ರೇಲಿಯಾದ ಅಡಿಲೇಡ್ ಓವಲ್ ಕ್ರೀಡಾಂಗಣದಲ್ಲಿಂದು ಭಾರತ ಹಾಗೂ ಆಸ್ಟ್ರೇಲಿಯಾ ನಡುವಿನ ಬಾರ್ಡರ್ ಗವಾಸ್ಕರ್ ಟ್ರೋಫಿ ಟೆಸ್ಟ್ ಕ್ರಿಕೆಟ್ ಸರಣಿಯ ಎರಡನೇ ಪಂದ್ಯ ಆರಂಭವಾಗಿದ್ದು, ಟಾಸ್ ಗೆದ್ದ ಭಾರತ, ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿದೆ.

ಮೊದಲನೇ ದಿನವಾದ ಇಂದು ಚಹಾ ವಿರಾಮದ ವೇಳೆಗೆ ಭಾರತ, ೪ ವಿಕೆಟ್ ನಷ್ಟಕ್ಕೆ ೮೨ ರನ್ ಗಳಿಸಿತ್ತು.

********ಮುಕ್ತಾಯ********